ವ್ಯವಸ್ಥೆಯ ಸುಡು ವಾಸ್ತವ ಪಂಪನ ಕಾವ್ಯದಲ್ಲಿ ಚಿತ್ರಣಗೊಳ್ಳುವುದು ಹೀಗೆ.

ಪಂಪನ ಕಾವ್ಯಗಳು ಜೀವನಪ್ರೀತಿಯ ಅಕ್ಷಯಪಾತ್ರೆಗಳೂ ಹೌದು. ಆದಿಪುರಾಣದಲ್ಲಿ ತನ್ನ ಚತುರ್ಬಲದಿಂ ಕೂಡಿ ದಂಡಯಾತ್ರೆಗೆ ಹೊರಡುವ ಭರತ ಚಕ್ರವರ್ತಿಯು ತನ್ನೊಂದಿಗೆ ತನ್ನ ತೊಂಬತ್ತಾರು ಸಾವಿರ ರಾಣಿಯರನ್ನು ಕರೆದುಕೊಂಡು ಹೋಗುತ್ತಾನೆ. ಹೋದವನು ಯುದ್ಧವನ್ನು ಮರೆತು 'ಆರೂ ಋತುಗಳ ಸೌಂದರ್ಯವೇ ಮೈವೆತ್ತಂತೆ ಇದ್ದಂತಹ ಉದ್ಯಾನವೊಂದಕ್ಕೆ ಬಂದು ಅದರ ಸೌಂದರ್ಯಕ್ಕೆ ಮನಸೋತು ಅಲ್ಲೇ ಬೀಡು ಬಿಡುತ್ತಾನೆ. ಆತನ ರಾಣಿಯರು ಆ ಉದ್ಯಾನದೊಳಗೆಲ್ಲ ಸುತ್ತಿ, ಒಬ್ಬಬ್ಬರೂ ಒಂದೊಂದು ವೃಕ್ಷದ, ಹೂವಿನ ಸೌಂದರ್ಯಕ್ಕೆ ಮನಸೋತು ಅವುಗಳನ್ನೇ ತಮ್ಮ ಮನದನ್ನೆಯರನ್ನಾಗಿ ಮಾಡಿಕೊಳ್ಳುತ್ತಾರೆ. ಆ ಪ್ರಕೃತಿಯೇ ಅವರಿಗೆ ಪ್ರೇಮಪಾಠಗಳನ್ನು ಹೇಳಿ ಕೊಡುವಂತೆ ಅವರಿಗೆ ಭಾಸವಾಗುತ್ತದೆ.

**ರತದೊಳಗ್ಗಳಂ ಮುಖರತಂ ಸುರತೋತ್ಸವಮೆಂದು ಕಾಮಿನೀಪ್ರತತಿಗೆ ತೋರ್ಪವೊಲ್**
**ಮಧುರ, ಸೀತ್ಕೃತನಾದದೊಳುಣ್ಮೆ ಪೊಣ್ಮೆ ಚೂಷಿತಕಮನ್ ಔಪರಿಷ್ಟಕರತಂಗಳ**
**ಭೇದದೊಳೊಂದಿದ ಆಮ್ರಚೂಷಿತಕಮನ್ ಆಮ್ರಪಕ್ವಫಲದೊಳ್ ಶುಕಕಾಮಿನಿ**
**ಚೆಲ್ವದೋರಿದಳ್**

ಪಂಪನ 'ಆದಿಪುರಾಣ'ದ ಹನ್ನೊಂದನೆ ಆಶ್ವಾಸದ 97ನೇ ಪದ್ಯವಿದು. ವಸಂತಮಾಸದ ಸಮಯವದು. ಆ ಉದ್ಯಾನವನದಲ್ಲಿನ ಮರ–ಗಿಡಗಳನ್ನು ಕಂಡು ಸಂಭ್ರಮಿಸುವ ಆತನ ಸುಂದರ ಮಡದಿಯರಲ್ಲಿ ಒಬ್ಬಳಿಗೆ ಮಾವಿನ ಮರದಲ್ಲಿ ಕಂಡ ದೃಶ್ಯವೇ ಮೇಲಿನ ಪದ್ಯ. ಪದ್ಯದ ಸಾರಂಶವಿಷ್ಟು: 'ಮುಖರತವುಳ್ಳ ಸಂಭೋಗವು ರತಿಕ್ರೀಡೆಯಲ್ಲಿ ಅತ್ಯುತ್ತಮವಾದದ್ದು, ಎಂದು ಕಾಮಿನಿಯರಿಗೆ ತೋರಿಸುವಂತೆ, ಹೆಣ್ಣು ಗಿಳಿಯೊಂದು, ಮಾವಿನ ಹಣ್ಣಿನ ಮೇಲೆ ಕುಳಿತು ಅದನ್ನು ಬಾಯಿಂದ ಕಚ್ಚಿ ಚಪ್ಪರಿಸುತ್ತಾ, ಮಧುರವಾಗಿ ಸೀತ್ಕರಿಸುತ್ತಾ ಔಪರಿಷ್ಟಕರತಗಳಲ್ಲಿ ಒಂದಾದ ಆಮ್ರಚೂಷಿತಕದ ಪ್ರಯೋಗ ಪಾಠವನ್ನು ಭರತನ ಮಡದಿಯರಿಗೆ ತೋರಿಸುವಂತಿತ್ತು.'

(1. ಔಪರಿಷ್ಟಕರತ ಎಂದರೆ – ಗಂಡಿನ ಮೇಲೆ ಹೆಣ್ಣು ಮಲಗಿ ಸಂಭೋಗಿಸುವ ವಿಧಾನಗಳು
2. ಆಮ್ರ ಚೂಷಿತಕ ಎಂದರೆ – ಮಾವಿನ ಹಣ್ಣನ್ನು ಬಾಯಿಂದ ಕಚ್ಚಿ, ಚೀಪಿ, ಚಪ್ಪರಿಸುವುದು).

ಪಂಪ ತನ್ನನ್ನು ತಾನು 'ಕೇರಳದ ವಿಟವನಿತೆಯರ ಸೊಂಟದ ದಾರದ ಅರುಣಮಣಿ. ಆಂಧ್ರದ ಸುಂದರಿಯರ ದೊಡ್ಡ ಸ್ತನಗಳಿಗೆ ಹಾರ' ಎಂದು ಹೊಗಳಿಕೊಳ್ಳುವ ರಸಿಕ. ಇಂಥ ರಸಿಕ ಚಕ್ರವರ್ತಿಯ ಕಾವ್ಯವು ಆರೋಗ್ಯಕರವಾದ ಲೈಂಗಿಕ ಶಿಕ್ಷಣದ ಪಾಠಗಳನ್ನು ತಿಳಿಸುವುದರ ಜೊತೆಗೆ, ಗಂಡು–ಹೆಣ್ಣಿನ ನಡುವೆ ಇರಬೇಕಾದ **intimate sexual relationship** ಕುರಿತೂ ಹೇಳುತ್ತದೆ.

ಪಂಪನ ಕಾವ್ಯಗಳನ್ನು ಮೊದಲ ಪುಟದಿಂದಲೋ ಕಡೆಯ ಪುಟದಿಂದಲೋ ಇಲ್ಲವೇ ಮಧ್ಯದಲ್ಲಿ ಎಲ್ಲಿಂದ ಹೇಗೆ ಓದಿದರೂ ಅಲ್ಲೊಂದು ಜೀವನ ದರ್ಶನ ನಮಗೆ ಕಾಣುತ್ತದೆ. ಆ ಕಾರಣದಿಂದಲೇ ಪಂಪನ ಕಾವ್ಯ ಮಾನವೀಯತೆಯ ದರ್ಶನದ, ಮಾನವ ಕರುಣೆಯ ಕಾವ್ಯಗಳು.

**ರೇಣುಕಾರಾಧ್ಯ ಎಚ್.ಎಸ್.**

ಹಳಗನ್ನಡ ಕಾವ್ಯದ ಬಗ್ಗೆ ಪ್ರೀತಿ–ಪರಿಶ್ರಮವುಳ್ಳ ಮೇಷ್ಟ್ರು ಪರಂಪರೆಯ ಗಟ್ಟಿ ಕೊಂಡಿಯಾಗಿ ಗಮನಸೆಳೆಯುವ ರೇಣುಕಾರಾಧ್ಯ ಎಚ್.ಎಸ್. ಮುಸುವಿನಕೊಪ್ಪಲುವಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರು. ಮೈಸೂರಿನಲ್ಲಿ ವಾಸ. ವಿಮರ್ಶೆ, ವಾಗ್ವಾದ, ರಸಾಸ್ವಾದಗಳಲ್ಲಿ ಅವರಿಗೆ ವಿಶೇಷ ಆಸಕ್ತಿ.